**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 66/2013**

ದಿನಾಂಕಃ 10.01.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 17 ಪ್ರಾಸಾ - 11

| | | |
|---|---|---|
| ಹೆಸರು | ಃ | ರುದ್ರಸ್ವಾಮಿ |
| ತಂದೆಯ/ಗಂಡನ ಹೆಸರು | ಃ | ನಾಗರಾಜು |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಬೊಮ್ಮಚನಹಳ್ಳಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಆರೋಪಿಗಳ ಪೈಕಿ 2 ನೇ ಆರೋಪಿ ರಾಜಣ್ಣನನ್ನು ಗುರುತು ಹಚ್ಚಬಲ್ಲೆ. ನೆನಪಿನ ಅಭಾವದಿಂದ ಆರೋಪಿ ಮಂಜುನಾಥನನ್ನು ಗುರುತು ಹಚ್ಚಲಾರೆ.

2. ದಿನಾಂಕ 10.06.2012 ರಂದು ಸಂಜೆ 4.30 ಗಂಟೆಗೆ ಬೊಮ್ಮಚನಹಳ್ಳಿ ಗ್ರಾಮದಲ್ಲಿರುವ ನಮ್ಮ ಮನೆಯ ಬಳಿ ಪೊಲೀಸರು ಸದರಿ ಆರೋಪಿ ವ್ಯಕ್ತಿಗಳನ್ನು ಕರೆತಂದಿದ್ದರು. ಆ ಕಾಲಕ್ಕೆ ದ್ವಿಚಕ್ರ ವಾಹನ ಸಂಖ್ಯೆ ಕೆಎ-42-ಇ-636 ನೊಂದಣಿ ಸಂಖ್ಯೆಯುಳ್ಳ ನನ್ನ ಮಾಲೀಕತ್ವದ ವಾಹನವನ್ನು ಅಮಾನತು ಕ್ರಮಕ್ಕೆ ಒಳಪಡಿಸಿರುತ್ತಾರೆ. ಈ ಬಗ್ಗೆ ಮಹಜರ್ ಸಹ ಬರೆದಿದ್ದರು. ಮಹಜರ್‌ಗೆ ನಾನು ರುಜು ಮಾಡಿದ್ದೇನೆ. ನನಗೆ ತೋರಿಸಿದ ರುಜು ನನ್ನ ರುಜು. ಸದರಿ ನನ್ನ ರುಜು

ಇರುವ ಮಹಜರ್‌ನ್ನು ಈಗ ನಿಶಾನೆ ಪಿ 11 ಎಂದು ಗುರುತು ಮಾಡಲಾಯಿತು. ನನ್ನ ರುಜುವನ್ನು ನಿಶಾನೆ ಪಿ 11(ಎ) ಎಂದು ಗುರುತು ಹಚ್ಚಲಾಯಿತು.

3. ಉಲ್ಲೇಖಿಸಿದ ದ್ವಿಚಕ್ರ ವಾಹವನ್ನು ನಾನು 2 ನೇ ಆರೋಪಿ ರಾಜಣ್ಣನಿಗೆ ನಿಶಾನೆ ಪಿ 11 ರ ನಿಕಟಪೂರ್ವ ದಿನಗಳಲ್ಲಿ ನೀಡಿದ್ದೆನು. ಅವನು ಆಗಾಗ್ಗೆ ಸದರಿ ವಾಹನವನ್ನು ನನ್ನ ಅನುಮತಿ ಮೇರೆಗೆ ತೆಗೆದುಕೊಂಡು ಹೋಗುತ್ತಿದ್ದು, ಆತ ಚಾಲಕ ವೃತ್ತಿ ಮಾಡುತ್ತಿದ್ದನು ಮತ್ತು ನನ್ನ ಸ್ವಾಧೀನದಲ್ಲಿದ್ದ ಟ್ರ್ಯಾಕ್ಟರ್ ವಾಹನವನ್ನು ಸಹ ಚಲಿಸುತ್ತಿದ್ದನು.

4. ಸದರಿ ದ್ವಿಚಕ್ರ ವಾಹನವನ್ನು ಕೊಲೆ ಪ್ರಕರಣದಲ್ಲಿ ಆರೋಪಿಗಳು ಉಪಯೋಗಿಸಿರುವುದಾಗಿ ನನಗೆ ತಿಳಿದು ಬಂತು. ಸದರಿ ಮೋಟಾರ್ ಸೈಕಲ್‌ನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಮೋಟಾರ್ ಸೈಕಲ್‌ನ ತಾತ್ಕಾಲಿಕ ಅಭಿರಕ್ಷೆಯನ್ನು ನಾನು ಪಡೆದಿದ್ದೇನೆ.

**<u>ಪಾಟೀ ಸವಾಲುಃ</u> ಶ್ರೀ.ಟಿ.ಜಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

5. ನಿಶಾನೆ ಪಿ 11 ರ ನಿಕಟಪೂರ್ವ 6 ತಿಂಗಳುಗಳಲ್ಲಿ ಉಲ್ಲೇಖಿಸಿದ ಮೃತ ರಾಜಣ್ಣ ನನ್ನಲ್ಲಿ ಕೆಲಸ ನಿರ್ವಹಿಸುತ್ತಿದ್ದನು. ಯಾವ ಯಾವ ನಿಖರ ದಿನಾಂಕಗಳಂದು ಆತ ಕೆಲಸ ನಿರ್ವಹಿಸುತ್ತಿದ್ದನು ಎಂಬುವುದಾಗಿ ಈಗ ನುಡಿಯಲಾರೆ. ಆರೋಪಿ ರಾಜಣ್ಣ ನನ್ನ ಬಾಬ್ತು

ಟ್ರ್ಯಾಕ್ಟರ್ ವಾಹನವನ್ನು ಚಲಿಸುತ್ತಿದ್ದ ಬಾಬ್ತು ನಾನು ಆತನಿಂದ ಆತನ ಚಾಲನಾ ಪರವಾನಗಿ ದಾಖಲೆಯನ್ನು ಪಡೆದಿರಲಿಲ್ಲ. ನಾನು ಉಲ್ಲೇಖಿಸಿದ ದ್ವಿಚಕ್ರ ವಾಹನ ನನ್ನ ಮಾಲೀಕತ್ವದಲ್ಲೇ ಇತ್ತು.

6. ಸದರಿ ಮೃತ ಆರೋಪಿ ರಾಜಣ್ಣ ನನ್ನ ಬಳಿ ನಿಶಾನೆ ಪಿ 11 ರ ನಿಕಟಪೂರ್ವ ಸಮಯದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬಾಬ್ತು ಯಾವುದೇ ದಾಖಲಾತಿಗಳನ್ನು ಹೊಂದಿಲ್ಲ. ಆರೋಪಿ ರಾಜಣ್ಣ ತುಮಕೂರು ಸ್ಥಳದವನೇ ಎಂದು ತಿಳಿದಿದ್ದೆನು. ಆದರೆ ಅವರ ಸ್ವಂತ ಊರಿನ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರಲಿಲ್ಲ. ಆರೋಪಿ ರಾಜಣ್ಣ ಯಾವ ಕಾಲಕ್ಕೂ ನನ್ನ ಬಳಿ ಕೆಲಸ ನಿರ್ವಹಿಸಿರಲಿಲ್ಲ, ನಾನು ಪೊಲೀಸರ ಚಿತಾವಣೆ ಮೇರೆಗೆ ಅಸತ್ಯ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

7. ನಿಶಾನೆ ಪಿ 11 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ರಾಜಣ್ಣ ಯಾವ ಕಾಲಕ್ಕೂ ಉಲ್ಲೇಖಿಸಿದ ದ್ವಿಚಕ್ರ ವಾಹನವನ್ನು ನನ್ನಿಂದ ತೆಗೆದುಕೊಂಡು ಹೋಗಿರುವುದಿಲ್ಲ, ನಾನು ತನಿಖಾಧಿಕಾರಿಗಳ ಮಾತಿನ ಮುಲಾಜಿಗೆ ಈ ಬಗ್ಗೆ ಅಸತ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ರಾಗಿ ಮಿಲ್ ಮತ್ತು ರೈಸ್ ಮಿಲ್‌ನ್ನು ಹೊಂದಿದ್ದೆನು. ಆದರೆ ಸದರಿ ಹೊಂದುವಿಕೆಯ ಹಿನ್ನೆಲೆಯಲ್ಲಿ ಪೊಲೀಸರೊಂದಿಗೆ ಉತ್ತಮ ಸಂಭದವನ್ನು ಹೊಂದಿದ್ದೆನು ಎಂದರೆ ಸರಿಯಲ್ಲ.

8. ನಾನು ಮೃತ ಆರೋಪಿ ರಾಜಣ್ಣ ಕುರಿತಂತೆ ಅಸತ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.